ಓಸ್ ನಂ. 277/2019
ಪಿಡಬ್ಲ್ಯೂ 1

<u>ಸಾಕ್ಷಿಯನ್ನು ದಿಃ 09.12.2021. ರಂದು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.</u>

<u>ಮುಖ್ಯ ವಿಚಾರಣೆಃ ವಾದಿ ಪರ ಶ್ರೀ. ಎಲ್.ವಿ.ವಿ. ವಕೀಲರಿಂದ</u>

ಸಾಕ್ಷಿ ಇಂದು ಸಾಕ್ಷಿ ಕಟ್ಟೆಯಲ್ಲಿ ನಿಂತು ತಮ್ಮ ಮುಂದುವರೆದ ಮುಖ್ಯ ವಿಚಾರಣೆಯ ಭಾಗವಾಗಿ ಪ್ರಮಾಣ ಪತ್ರ ಸಲ್ಲಿಸಿದ್ದು ಅದರಲ್ಲಿ ತಿಳಿಸಿರುವ ಅಂಶಗಳಲ್ಲೆವು ಸತ್ಯವಾಗಿರುತ್ತದೆ ಹಾಗೂ ಅದರಲ್ಲಿರುವ ಸಹಿ ತನ್ನದೇ ಎಂದು ಹೇಳಿರುತ್ತಾರೆ.

ದಿಃ 28.06.2017 ರ ನೊಂದಾಯಿತ ಕ್ರಯದ ಕರಾರು ಪತ್ರವನ್ನು ನಿಪಿ -1 ಎಂದು, ಅದರಲ್ಲಿನ ಸಾಕ್ಷಿದಾರರ ಸಹಿಯನ್ನು ನಿಪಿ-1 (ಎ) ಎಂದು ಗುರುತಿಸಲಾಯಿತು. ಸಾಕ್ಷಿದಾರರು ಪ್ರತಿವಾದಿಗಳ, ಸಾಕ್ಷಿದಾರರ ಹಾಗೂ ಪತ್ರ ಬರಹಗಾರರ ಸಹಿಗಳನ್ನು ನೋಡಿ ಗುರುತಿಸಿ ಅವರ ಸಮಕ್ಷಮ ನಿಪಿ -1 ಅನ್ನು ಸಿದ್ದಪಡಿಸಲಾಗಿದೆ ಎಂದು ನುಡಿದಿರುತ್ತಾರೆ. ದಿಃ 28.06.2017 ರ ಇಸಿ ಪ್ರಮಾಣ ಪತ್ರವನ್ನು ನಿಪಿ-2 ಎಂದು, ದಾವಾ ಸ್ವತ್ತಿಗೆ ಸಂಬಂಧಿಸಿದ ಆರ್ ಟಿಸಿಯನ್ನು ನಿಪಿ-3 ಎಂದು, ದಿಃ 28.06.2019 ರ ಲೀಗಲ್ ನೋಟಿಸನ್ನು ನಿಪಿ -4 ಎಂದು, ಎರಡು ಅಂಚೆ ರಸೀದಿಗಳನ್ನು ಒಟ್ಟಾಗಿ ನಿಪಿ -5 ಎಂದು , ಅಂಚೆ ಸ್ವೀಕೃತಿಯನ್ನು ನಿಪಿ-6 ಎಂದು, ದಿಃ 06.07.2019 ರ ಪ್ರತ್ಯುತ್ತರ ಪತ್ರವನ್ನು ನಿಪಿ-7 ಎಂದು ಗುರುತಿಸಲಾಯಿತು.

ಪಾಟೀ ಸವಾಲಿಗೇ ಸಮಯ ಕೋರಿದ್ದು ಸಮಯ ನೀಡಲಾಯಿತು.

( ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು .)

ಓ. ಹೇ.ಕೇ. ಸರಿ ಇದೆ .

ಪ್ರಧಾನ ದಿವಾಣಿ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ
ಕುಣಿಗಲ್